




# ಚೆಂಗಂನಲ್ಲಿ ರಾಮಕೃಷ್ಣ ಮಠದ ಉದ್ಘಾಟನೆ

ತಮಿಳುನಾಡಿನ ಚೆಂಗಂನಲ್ಲಿರುವ ರಾಮಕೃಷ್ಣ ಟ್ರಸ್ಟ್ ಅಲ್ಲಿರುವ ಆಶ್ರಮವನ್ನು ಬೇಲೂರು ಮಠಕ್ಕೆ ಹಸ್ತಾಂತರಿಸಿದ್ದು, ೨೦೨೨ರ ನವೆಂಬರ್ ೨೮ರಂದು ಅಲ್ಲಿ ರಾಮಕೃಷ್ಣ ಮಠದ ಹೊಸ ಶಾಖಾಕೇಂದ್ರದ ಉದ್ಘಾಟನೆಯು ಅತ್ಯಂತ ಸಂಭ್ರಮದಿಂದ ನೆರವೇರಿತು. ಶ್ರೀರಾಮಕೃಷ್ಣ ಮಂದಿರದ ಮರು-ಲೋಕಾರ್ಪಣೆಯು ೧೨ ವರ್ಷಗಳ ನಂತರ ನಡೆಯಿತು. ಈ ಸಂದರ್ಭದಲ್ಲಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಈ ಪವಿತ್ರ ಸಮಾರಂಭದಲ್ಲಿ ಸುಮಾರು ೩೦೦೦ ಮಂದಿ ಭಕ್ತ ಜನರು ಭಾಗವಹಿಸಿದ್ದರು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಎಲ್ಲ ಕಾರ್ಯಕ್ರಮಗಳಲ್ಲಿ ಅಧ್ಯಕ್ಷತೆ ವಹಿಸಿದ್ದರು.

ಈ ಕಾರ್ಯಕ್ರಮಗಳಲ್ಲಿ ಒಟ್ಟು ೬೬ ಮಂದಿ ಸಂನ್ಯಾಸಿಗಳು (ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳು; ಖಾಸಗಿ ಮಠಗಳ ೬ ಮಂದಿ ಸಂನ್ಯಾಸಿಗಳು; ಖಾಸಗಿ ಮಠದ ೮ ಮಂದಿ ಸಂನ್ಯಾಸಿನಿಯರು) ಭಾಗವಹಿಸಿದ್ದರು.

೨೦೨೨ರ ನವೆಂಬರ್ ೨೬ ರಂದು ಸಂಜೆ ೪-೩೦ ರಿಂದ ೮-೦೦ರ ವರೆಗೆ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಇದನ್ನು ೨೦೦೦ ಮಂದಿ ಭಕ್ತರು ಹಾಗೂ ೧೦೦೦ ಮಂದಿ ಪಾಲಕರು ವೀಕ್ಷಿಸಿದರು.

ನವೆಂಬರ್ ೨೬ ರಂದು ಹಾಗೂ ೨೮ ರಂದು ಎಲ್ಲ ಭಕ್ತರಿಗೆ ಉಪಹಾರ, ಮಧ್ಯಾಹ್ನ ಭೋಜನ ಪ್ರಸಾದ ಹಾಗೂ ರಾತ್ರಿಯ ಊಟದ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ ಹಾಗೂ ಸಾಯಂಕಾಲ ನಡೆದ ಸಭಾ ಕಾರ್ಯಕ್ರಮಗಳಲ್ಲಿ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಅಧ್ಯಕ್ಷತೆ ವಹಿಸಿ, ಆಶೀರ್ವಚನ ನೀಡಿದರು. ತಮಿಳುನಾಡಿನ ಬಹುಪಾಲು ರಾಮಕೃಷ್ಣ ಮಠಗಳ ಅಧ್ಯಕ್ಷರುಗಳು ಸಭಾಕಾರ್ಯಕ್ರಮಗಳಲ್ಲಿ ಭಾಷಣ ಮಾಡಿದರು.





Managing Editor : Swami Muktidananda    Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020